"ಕನ್ನಡ ಕಲಿ" ಕಾರ್ಯಕ್ರಮವನ್ನು ನಿಮ್ಮ ನಿಮ್ಮ ಊರಿನಲ್ಲಿ ಪ್ರಾರಂಭಿಸಿ ಮತ್ತು ಕನ್ನಡ ಭಾಷೆಯನ್ನು ನಿಮ್ಮ ಮುಂದಿನ ಪೀಳಿಗೆಗೆ ಮುಂದುವರೆಸಲು ಸಹಕರಿಸಿ.

ಕನ್ನಡ ಬಳಗ ಯು.ಕೆ.ಯ ಯುವಸದಸ್ಯರು ತಮ್ಮ ತಮ್ಮ ಮಕ್ಕಳಿಗೆ ಕನ್ನಡ ಭಾಷೆಯ ಓದು ಮತ್ತು ಬರಹವನ್ನು ಕಲಿಸಲು ಬಹಳ ಹುರುಪಿನಿಂದ ಮುಂದೆ ಬಂದಿದ್ದಾರೆ. ಇವರ ಈ ಉತ್ಸಾಹಕ್ಕೆ ಬೆಂಬಲವಾಗಿ ಕನ್ನಡ ಬಳಗ ಯು.ಕೆ. ಬ್ರಿಟಿಷ್ ಸಮುದಾಯ ದ್ವೀಪಗಳಲ್ಲಿ " ಕನ್ನಡ ಕಲಿ " ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿರ್ಧರಿಸಿದೆ. ನಮ್ಮ ಸಹೋದರ ಸಂಸ್ಥೆ ಅಮೇರಿಕಾದ ಅಕ್ಕ ಬಳಗವು ತನ್ನ ಮೂಲಕರ್ತ "ಕನ್ನಡ ಕಲಿ" ಈ ಕಾರ್ಯಕ್ರಮವನ್ನು ಕಳೆದ ೧೦ ವರ್ಷಗಳಿಂದ ಬಹಳ ಯಶಸ್ವಿಯಾಗಿ ನಡೆಸುತ್ತಾ ಬಂದಿದೆ. ಅಲ್ಲಿನ ಹಿರಿಯ ಕನ್ನಡ ಕಾರ್ಯಕರ್ತರೊಬ್ಬರ ಅಭಿಪ್ರಾಯದಲ್ಲಿ, ಅಮೇರಿಕಾದಲ್ಲಿ ಈ ಕಾರ್ಯಕ್ರಮದ ನೆರವಿನಿಂದ ಕನ್ನಡ ಕಲಿತ ಮಕ್ಕಳು, ಕರ್ನಾಟಕದಲ್ಲಿನ ಅದೇ ವಯಸ್ಸಿನವರಿಗಿಂತಾ ಉತ್ತಮ ಮಟ್ಟ ಗಳಿಸಿದ್ದಾರೆ ಎಂದಿದ್ದಾರೆ.

ಕನ್ನಡ ಬಳಗದ ಯುವ ಸದಸ್ಯರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಮಕ್ಕಳನ್ನು ಅದೇ ಮಾರ್ಗದಲ್ಲಿ ನಡೆಸಲು ಮುಂದೆ ಬಂದಿದ್ದಾರೆ. ಈ ಕಾರ್ಯಕ್ರಮವನ್ನು ಸ್ವಯಂಸೇವಾ ಆಧಾರದದ ಮೇಲೆ ಪ್ರಾರಂಭಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ತಂದೆತಾಯಿಯರು, ಪ್ರಾರಂಭದಲ್ಲಿ ೫ ರಿಂದ ೧೦ ಮಕ್ಕಳ ಗುಂಪಿನಲ್ಲಿ ಪ್ರತಿವಾರ ಅಥವ ೨ ವಾರಗಳಿಗೊಮ್ಮೆ ನಿಗದಿ ಪಡಿಸಿದ ಜಾಗಗಳಲ್ಲಿ ಸಂಧಿಸಿ ಕನ್ನಡ ಆಡುಭಾಷೆಯ ತರಗತಿಗಳನ್ನು ಶುರುಮಾಡುವುದು. ಈ ಕಾರ್ಯಕ್ರಮದಲ್ಲಿ ಸ್ವಯಂಸೇವಕರಾಗಿ ಭಾಗವಹಿಸುವ ತಂದೆತಾಯಿಯರಿಗೆ, ಈ ತರಗತಿಗಳನ್ನು ಯಶಸ್ವಿಯಾಗಿ ನಡೆಸುವ ಸಲಹೆ ಮತ್ತು ತರಬೇತಿ ನೀಡಲಾಗುವುದು.

ಇದರಲ್ಲಿ ಆಸಕ್ತಿಯುಳ್ಳವರು ಶೀಘ್ರವಾಗಿ ಕನ್ನಡ ಬಳಗದ  ಕಾರ್ಯಕರ್ತರನ್ನು ಸಂಪರ್ಕಿಸಿ ಈ ಕಾರ್ಯಕ್ರಮಕ್ಕೆ  ಸಂಭಂಧಪಟ್ಟ ವಿವಿಧ ವಿಷಯಗಳ ಬಗ್ಗೆ, ಭೋಧನಾ ಸಾಮಗ್ರಿಗಳ ಬಗ್ಗೆ ಮಾಹಿತಿ ಪಡೆಯಬಹುದು. ಈ ಕಾರ್ಯಕ್ರಮವನ್ನು ಆದಷ್ಟೂ ಕಡಿಮೆ ವೆಚ್ಚದಲ್ಲಿ ನಡೆಸುವ ಉದ್ದೇಶದಿಂದ ಈ ಕಾರ್ಯಕ್ರಮದಲ್ಲಿ ಕೇವಲ ಸ್ವಯಂಸೇವಕ ಅಧ್ಯಾಪಕರು ಅದರಲ್ಲೂ ಮಕ್ಕಳ ತಂದೆ ತಾಯಿಯರನ್ನೇ ನೇಮಕಾತಿ ಮಾಡಲಾಗುವುದು. ತರಗತಿ ನಡೆಸುವ ಕೊಠಡಿಗಳನ್ನು ಅತ್ಯಂತ ಕಡಿಮೆ ದರದಲ್ಲಿ ದೊರುಕುವ ಅಥವ ಪೂರ್ಣ ರಿಯಾಯಿತಿ ಇರುವ ಜಾಗಗಳಲ್ಲಿ ನಡೆಸುವ ಪ್ರಯತ್ನ ನಡೆಸಬೇಕಾಗಬಹುದು. ಪ್ರತಿ ನಗರದಲ್ಲೂ ಸಮುದಾಯ ಭವನ, ಶಾಲಾತರಗತಿಗಳು, ಚರ್ಚ್ ಹಾಲ್, ದೇವಸ್ಥಾನ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ತರಗತಿಗಳಿಗೆ ಉತ್ತಮ ಸ್ಥಳಗಳು. ಮನೆಗಳಲ್ಲಿ ಈ ತರಗತಿಳನ್ನು ನಡೆಸುವುದರಿಂದ  ಊಟ ಉಪಚಾರಗಳು ಮಾತುಕತೆಗಳು ಅಡ್ಡಿಬರುವುವೆಂಬ ಭೀತಿಯಿಂದ ಈ ತರಗತಿಗಳನ್ನು  ನಿಗತಿತ ಸ್ಥಳಗಳಲ್ಲಿ ನಡೆಸಬೇಕೆಂದು ಸಲಹೆ ಮಾಡಲಾಗಿದೆ.

ಮೇಲ್ಕಂಡ ಕಾರ್ಯಕ್ರಮದ ಸಂಪೂರ್ಣ ಮಾಹಿತಿಗಾಗಿ ಈ ಕೆಳಕಂಡ ಬಳಗದ

ಕಾರ್ಯಕರ್ತರನ್ನು ಅವರ ವಿದ್ಯುತ್-ಅಂಚೆ(ಇ-ಮೇಲ್)ಯ ಮೂಲಕ ಸಂಪರ್ಕಿಸಬಹುದು.

೧. ಡಾ.ರಾಜಾರಾಮ್ ಕಾವಳೆ.
cavalerr@gmail.com

2. ಡಾ.ಉಮಾ ವೆಂಕಟೇಶ್.
venkatesh.uma@gmail.com